## ಭ್ರಷ್ಟಾಚಾರ ಬಯಲು

ಸಿರಿ ಕನ್ನಡದ 'ಯುಗಾಂತರ' ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ಆಡಳಿತ ಮತ್ತು ರಾಜಕೀಯದ ಬಗ್ಗೆ ಸೂಕ್ಷ್ಮವಾಗಿ ಪರಿಚಯಿಸುತ್ತಿದ್ದಾರೆ. ಎಸ್. ಎನ್. ಸೇತುರಾಮ್ ಅವರು ರಾಜಕೀಯ ಮತ್ತು ಆಡಳಿತದ ಭ್ರಷ್ಟಾಚಾರದ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡುತ್ತಿದ್ದಾರೆ. ಕಥೆ ಕುತೂಹಲದಿಂದ ನೋಡುವಂತಾಗಿದೆ. ಪಾತ್ರಧಾರಿಗಳ ಅಭಿನಯವೂ ಮನ ಮೆಚ್ಚುವಂತಿದೆ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

'ಯುಗಾಂತರ' ಧಾರಾವಾಹಿಯ ಕಥಾ ಹಂದರ ಶಿಥಿಲಗೊಳ್ಳುತ್ತಿದೆ. ಕಥೆಯಲ್ಲಿ ಸಂಭವಿಸುವ ಘಟನೆಗಳ ಹೊಂದಾಣಿಕೆಯಲ್ಲಿ ಸಮರ್ಪಕತೆ ಇಲ್ಲ. ಪ್ರಾಮಾಣಿಕ ಬದುಕಿಗೆ ಮಸಿ ಬಳಿಯುವ ಸಂದರ್ಭಗಳು ಬಾಲಿಶ ಅನಿಸುತ್ತದೆ. ಸಮಾನಾಂತರ ಕಥೆಗಳ ಸನ್ನಿವೇಶಗಳು ಬೆಸೆಯುವಲ್ಲಿ ವಿಫಲವಾಗಿವೆ. ನೆಗೆಟಿವ್ ಪಾತ್ರದಲ್ಲಿ ರಂಗಧಾಮ ಮತ್ತು ರಮಾನಂದ ಮಿಂಚುತ್ತಾರೆ. ರಮಾನಂದ ಉಸ್ತುವಾರಿ ಮಂತ್ರಿಯಿಂದ ಆಸ್ತಿ ತನ್ನದು ಮಾಡಿಕೊಳ್ಳುವ ಸನ್ನಿವೇಶ, ಉಸ್ತುವಾರಿ ಬೆಸ್ತುಬೀಳುವ ಪರಿ ಚೆನ್ನಾಗಿ ಮೂಡಿಬಂದಿದೆ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ವಾರದ ಪತ್ರ

## ಎಂದೂ ಬಾಡದ ಎದೆಯಂಗಳದ ಹೂ

ಅಪ್ಪು ಸೆಲೆಬ್ರೇಷನ್ ಕಾರ್ಯಕ್ರಮದಲ್ಲಿ ರಾಷ್ಟ್ರಪ್ರಶಸ್ತಿ ಪಡೆದ 'ಬೆಟ್ಟದ ಹೂ' ಕಥೆಯನ್ನು ಮರುಸೃಷ್ಟಿ ಮಾಡಿದರು. ಮಕ್ಕಳ ನಟನೆ ಮನಮೆಚ್ಚುವಂತಿತ್ತು. ಕೊನೆಯಲ್ಲಿ ಶರ್ಲಿ ಮೇಡಂಗೆ ಬೆಟ್ಟದ ಹೂ ನೀಡಿ ಹತ್ತು ರೂಪಾಯಿ ಪಡೆಯುವ ರಾಮುವಿನ ಮನದಲ್ಲಿ ವಾಲ್ಮೀಕಿ ರಾಮಾಯಣ ಪುಸ್ತಕ ಒಂದು ಕಡೆ, ಹೊದೆಯಲು ಕಂಬಳಿ ಇಲ್ಲದೆ ಚಳಿಯಲ್ಲಿ ನಡುಗುವ ತಾಯಿ ಒಂದು ಕಡೆ. ರಾಮು ಕಂಬಳಿ ಖರೀದಿಸಿ ತಾಯಿಗೆ ಹೊದಿಸುವ ದೃಶ್ಯ ಪ್ರಸ್ತುತ ಸಮಾಜಕ್ಕೆ ಪಾಠ ಹೇಳಿದಂತೆ ಇತ್ತು.

ಆ ಧರ್ಮ, ಈ ಧರ್ಮ ಎಂದು ಅರಚಾಡುವ ಸಮಾಜದಲ್ಲಿ ತಾಯಿಯೆ ದೇವರು ಎಂಬುದನ್ನು ಸಾರಿ ಹೇಳಿತು. ಬಾಲನಟನಾಗಿ ಪುನೀತ್ ಅಭಿನಯದ ಪಾತ್ರಗಳ ಮರುಸೃಷ್ಟಿ ರಂಜಿಸಿತು. ಈ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದ ಕಲರ್ಸ್ ಕನ್ನಡ ವಾಹಿನಿಗೂ, ಕಲಾವಿದರಿಗೂ, 'ನಮ್ಮಮ್ಮ ಸೂಪರ್ ಸ್ಟಾರ್ 2' ತಂಡಕ್ಕೂ ಅಭಿನಂದನೆಗಳು.

—ಮಲ್ಲಿಕಾರ್ಜುನ ಸುರಧೇನುಪುರ

## ಸಂಪ್ರದಾಯ: ಮೂಗು ಮುರಿಯಬೇಡಿ

ಸ್ಟಾರ್ ಸುವರ್ಣದ 'ಜೇನುಗೂಡು' ಮನರಂಜನೆಯ ಕೂಡುಕುಟುಂಬದ ಸೊಬಗನ್ನು ಉಣಬಡಿಸುತ್ತಿದೆ. ಸಾಂಪ್ರದಾಯಿಕ ಹಬ್ಬ ಹರಿದಿನ, ಮದುವೆ ಮುಂಜಿಗಳಲ್ಲಿ ಶಾಸ್ತ್ರ ಸಂಪ್ರದಾಯಗಳನ್ನು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಪೌರಾಣಿಕ ಪುಟ್ಟ ಪುಟ್ಟ ಕಥೆಗಳನ್ನು ಆರೋಗ್ಯಕರವಾಗಿ ಅಭಿವ್ಯಕ್ತಿಸುತ್ತಿದ್ದಾರೆ. ಅದರ ವಿವರಣೆ ನಿಜಕ್ಕೂ ಅರ್ಥಪೂರ್ಣವಾಗಿರುತ್ತದೆ.

ಹಿಂದಿನಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವ ಯಾವುದೇ ಆಚಾರ ವಿಚಾರಗಳನ್ನು ಮೂಢನಂಬಿಕೆ ಎಂದು ಮೂಗುಮುರಿಯದೆ ಅವುಗಳಲ್ಲಿ ಹುದುಗಿರುವ ವೈಜ್ಞಾನಿಕ ವೈಚಾರಿಕ ಅಂಶವನ್ನು ಗುರುತಿಸುವುದು ಮುಖ್ಯ.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ವಾಸ್ತವ ಮರೆಯಬಾರದು

ಝೀ ಕನ್ನಡದ 'ಗಟ್ಟಿಮೇಳ'ದಲ್ಲಿ ವೇದಾಂತನ ಅಜ್ಜಿಗೆ ಕಣ್ಣು ಕಾಣಿಸುವುದಿಲ್ಲ. ಆದರೆ ಆಕೆಗೆ ಮಗಳು ವೈದೇಹಿಯ ಸ್ವರವೂ ಅಪರಿಚಿತವಾಗಿ ಗೋಚರಿಸಿ ಸ್ವಂತ ಮಗಳ ಗುರುತೇ ಹಿಡಿಯಲು ಆಗದೇ ಇರುವುದು ಸೋಜಿಗ.

'ಜೊತೆ ಜೊತೆಯಲಿ' ಧಾರಾವಾಹಿಯಲ್ಲಿ ಅಪಘಾತವಾದ ನಂತರ ನಾಯಕ ಆರ್ಯವರ್ಧನ್ ಅವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಲಾಗಿದೆ. ಹಾಗಾಗಿ ಅವರ ಮುಖಚಹರೆ ಯಾರಿಗೂ ಗುರುತಿಸಲು ಆಗುವುದಿಲ್ಲ. ಆಪ್ತರು, ಬಂಧುಬಳಗಕ್ಕೂ ಅವರ ಧ್ವನಿ ಅಥವಾ ಬಾಡಿ ಲ್ಯಾಂಗ್ವೇಜ್ ಅರಿವಾಗದಿರುವುದು ಅವಾಸ್ತವ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಮಹಿಳೆಯರಿಗೆ ಮಂದಿರವೇ ಗಮ್ಯವೆ?

ಕನ್ನಡದ ಧಾರಾವಾಹಿಗಳಲ್ಲಿ ಹೆಂಗಸರು ಮನೆ ಬಿಟ್ಟರೆ ಹೋಗುವುದೆಲ್ಲಿಗೆ? ಬಹುತೇಕ ಕಥೆಗಳಲ್ಲಿ ಅವರು ಗ್ರಂಥಾಲಯ, ಸ್ನೇಹಿತರ ಮನೆ, ಸಿನಿಮಾ, ವಾಯುವಿಹಾರಕ್ಕೆ ಹೋಗುವುದೇ ಇಲ್ಲ. ಹಾಗಾದರೆ ಹೋಗುವುದಾದರೂ ಎಲ್ಲಿಗೆ ಅಂದರೆ, ದೇವಸ್ಥಾನಕ್ಕೆ. ಮಹಿಳೆಯರಿಗೆ ತಮ್ಮ ಮನೆಯನ್ನು ಬಿಟ್ಟು ಹೊರ ನಡೆದರೆ ಅವರಿಗೆ ಇರುವ ಸ್ಥಳ ದೇವಸ್ಥಾನ ಮಾತ್ರವೇ ಎಂದು ಧಾರಾವಾಹಿಗಳ ನಿರ್ದೇಶಕರು ತಿಳಿದಂತಿದೆ.

—ಜಿ. ಮೃತ್ಯುಂಜಯ, ಬೆಂಗಳೂರು

## ಕನ್ನಡಕ್ಕೆ ಅರ್ಧಚಂದ್ರ

ಪ್ರತಿ ಸುದ್ದಿವಾಹಿನಿಗಳು ತಮ್ಮದೇ ಅದ ಲೋಗೊ ಹೊಂದಿರುತ್ತವೆ. ಸುದ್ದಿ ಪ್ರಸರಣದ ವೇಳೆ ಅವು ಎದ್ದು ಕಾಣುವಂತೆ ತೋರಿಸಲಾಗುತ್ತದೆ. ಆದರೆ, ಬಹುತೇಕ ಕನ್ನಡ ವಾಹಿನಿಗಳ ಲೋಗೊದಲ್ಲಿ ಕನ್ನಡದ ಅಕ್ಷರಗಳಿರುವುದಿಲ್ಲ. ಕೆಲವು ವಾಹಿನಿಗಳ ಹೆಸರಿನಲ್ಲಿ ಅರ್ಧ ಕನ್ನಡ, ಉಳಿದರ್ಧ ಇಂಗ್ಲಿಷ್ ಇರುತ್ತದೆ. 'ಟಿ.ವಿ.' ಎನ್ನುವುದೂ ಕನ್ನಡದಲ್ಲಿ ಇರುವುದಿಲ್ಲ. ಕನಿಷ್ಠ ಪಕ್ಷ ಪರದೆಯ ಒಂದು ಬದಿಯಲ್ಲಾದರೂ ವಾಹಿನಿಯ ಹೆಸರನ್ನು ಸಂಪೂರ್ಣ ಕನ್ನಡದಲ್ಲಿ ಬರುವಂತೆ ವಿನ್ಯಾಸ ಮಾಡಲಿ.

—ರಮಾನಂದ ಶರ್ಮಾ, ಬೆಂಗಳೂರು

## ಮತ್ತೆ ಮಾಯಾಮೃಗ

ದೂರದರ್ಶನದಲ್ಲಿ ಬಹಳ ಹಿಂದೆ ಪ್ರಸಾರವಾಗುತ್ತಿದ್ದ 'ಮಾಯಾಮೃಗ' ಧಾರಾವಾಹಿಯ ಮುಂದುವರಿದ ರೂಪವಾಗಿ 'ಮತ್ತೆ ಮಾಯಾಮೃಗ' ಸಿರಿಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ. ಇಪ್ಪತ್ತು ವರ್ಷಗಳ ನಂತರವೂ ಹಳೆಯ ಕಲಾವಿದರಿಂದ ಅವರವರ ಪಾತ್ರವನ್ನು ಮಾಡಿಸುತ್ತಿರುವುದು ಸೋಜಿಗ ಅನಿಸಿತು. ಧಾರಾವಾಹಿಯ ಮೊದಲ ಸಂಚಿಕೆ ಚೆನ್ನಾಗಿ ಮೂಡಿಬಂತು. ಬದಲಾದ ಕಾಲಮಾನದಲ್ಲಿ ಹೊಸ ಪೀಳಿಗೆಯ ಮಾಯಾಮೃಗ ಹೇಗೆ ಮೂಡಿಬರಬಹುದೆಂಬ ಕುತೂಹಲವಿದೆ.

—ಶಾಲಿನಿ ಮನೋಹರ್, ಬೆಂಗಳೂರು

## ದೀಪಾವಳಿ ಕೊಡುಗೆ

ಮರಾಠಿ ಮೂಲದ 'ಬಾಳು ಮಾಮ' ಧಾರಾವಾಹಿ ಕಲರ್ಸ್ ಕನ್ನಡದಲ್ಲಿ 'ಪವಾಡ ಪುರುಷ' ಎಂಬ ಹೆಸರಿನಲ್ಲಿ ಪ್ರಸಾರ ಆಗುತ್ತಿತ್ತು. ಆರಂಭಕ್ಕೆ ಹಿಂದಿನ ಸಂಚಿಕೆಯ ಸಂಕ್ಷಿಪ್ತ ತುಣುಕು ಪ್ರಸಾರ ಜೊತೆಗೆ ಎರಡ್ಮೂರು ಬಾರಿ ಶೀರ್ಷಿಕೆ ಹಾಡು ಕೇಳುವ ಹೊತ್ತಿಗೆ ಸಮಯ ಮುಗಿದುಹೋಗುತ್ತಿತ್ತು. ಧಾರಾವಾಹಿ ನೋಡಿದಂತೆ ಆಗುತ್ತಿರಲಿಲ್ಲ ಎನ್ನುವ ಕೊರಗು ಕಾಡುತ್ತಿತ್ತು. ಹೀಗಿರುವಾಗ ಅದರ ಸಮಯವನ್ನು ಒಂದು ಗಂಟೆಗೆ ಹಿಗ್ಗಿಸಿರುವುದು ವೀಕ್ಷಕರಿಗೆ ದೀಪಾವಳಿ ಕೊಡುಗೆ ನೀಡಿದಂತೆ ಆಗಿದೆ.

—ಅನುರಾಧ ಟಿ., ದಾವಣಗೆರೆ

## ಆಸಕ್ತಿ ಇಲ್ಲದ ಬಿಗ್‌ಬಾಸ್

ಕಲರ್ಸ್ ಕನ್ನಡದ 'ಬಿಗ್ ಬಾಸ್'ನಲ್ಲಿ ಸುಮ್ಮನೇ ಚೀರಾಡುವುದು ಶೋಭೆ ತರುವುದಿಲ್ಲ. ಹೆಣ್ಣು ಮಕ್ಕಳು ತುಂಡುಬಟ್ಟೆ ಧರಿಸುವುದೂ ಸೂಕ್ತವಲ್ಲ. ಅರುಣ್ ಸಾಗರ್ ಜೋಕರ್ ರೀತಿ ಮಾಡುತ್ತಿದ್ದಾರೆ. ಎಲ್ಲರೂ ಪ್ರೀತಿಯಿಂದ ಆಟವನ್ನು ಆಡಿದರೆ ನೋಡುವವರಿಗೂ ಖುಷಿ ಆಗುತ್ತದೆ. ಇಲ್ಲದಿದ್ದರೆ ನೋಡಲು ಆಸಕ್ತಿ ಹುಟ್ಟುವುದಿಲ್ಲ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ